# ಮಕ್ಕಳ ಅನುಭವ ಮತ್ತು ಸಾಮಾಜಿಕ ಸಮಸ್ಯೆಗಳಿಗೆ ಅವರ ಸ್ಪಂದನೆ

- **ಸಹಾಬುದ್ದೀನ್ ಅನ್ಸಾರಿ**

ಸಮಾಜವಿಜ್ಞಾನದ ಅಧ್ಯಯನ ಮಾಡುವಾಗ, ವಿದ್ಯಾರ್ಥಿಗಳು ಸಮಕಾಲೀನ ಸಾಮಾಜಿಕ ಸಮಸ್ಯೆಗಳನ್ನು ಮತ್ತು ತರಗತಿಯಲ್ಲಿನ ಅವರ ಅನುಭವಗಳನ್ನು ಅರ್ಥಮಾಡಿಕೊಳ್ಳಲು ಮತ್ತು ಈ ಎಲ್ಲವನ್ನೂ ಸಮಾಜ ವಿಜ್ಞಾನ ವಿಷಯದೊಂದಿಗೆ ಸಂಬಂಧಿಸಲು ಶಕ್ತರಾಗತಕ್ಕದ್ದು. ಮೌಲ್ಯಮಾಪನದ ಹಾದಿ ಕೇವಲ ಏಕಮುಖವಾದುದಲ್ಲ. ಮಕ್ಕಳಲ್ಲಿ ತಾವು ಕಲಿಯುವ ವಿಷಯದ ಅರಿವಿನ ಆಳ ಮತ್ತು ತಮ್ಮ ದೈನಂದಿನ ಜೀವನದಲ್ಲಿ ಅದರ ಸಂಬಂಧಗಳನ್ನು ಕಂಡುಕೊಳ್ಳಲು ಸಾಧ್ಯವಾಯಿತೇ ಎಂಬುದನ್ನು ನೋಡುವುದೂ ಮುಖ್ಯ. ಅವರಿಗೆ ಅವರ ಅನುಭವಕ್ಕೆ ಎಟುಕಿದಂತೆ ಅವರ ಅಭಿಪ್ರಾಯಗಳನ್ನು ಬರವಣಿಗೆಯಲ್ಲಿ ವ್ಯಕ್ತಪಡಿಸಲು ಸಾಧ್ಯವಾದರೆ, ಅದು ಶಿಕ್ಷಣದ ಆಶಯಗಳನ್ನು ಪೂರೈಸಿದಂತೆಯೇ ಸರಿ.

ಭಾರತದ ಸಂವಿಧಾನವು ದೇಶದ ನಾಗರಿಕರಿಗೆ ಸಮಾನತೆ, ಭ್ರಾತೃತ್ವ, ಜಾತ್ಯತೀತತೆ ಇತ್ಯಾದಿಗಳನ್ನು ಒಳಗೊಂಡಂತೆ ಅನೇಕ ಅವಕಾಶಗಳನ್ನು ಒದಗಿಸಿದೆ. ಭಾರತದ ನಾಗರಿಕರಿಗೆ ಕೆಲವು ಹಕ್ಕುಗಳನ್ನು ನೀಡಲಾಗಿದೆ – ಉದಾಹರಣೆಗೆ ಶಿಕ್ಷಣದ ಹಕ್ಕು ಮತ್ತು ಮಕ್ಕಳ-ಹಕ್ಕುಗಳು. ಶಿಕ್ಷಣದ ಮಹತ್ತ್ವವನ್ನು ಗಮನದಲ್ಲಿಟ್ಟುಕೊಂಡು ಸಂವಿಧಾನದ 86ನೇ ತಿದ್ದುಪಡಿಯಲ್ಲಿ, ಶಿಕ್ಷಣದ ಹಕ್ಕನ್ನು ಮೂಲಭೂತ ಹಕ್ಕುಗಳ ಅಡಿಯಲ್ಲಿ ಸೇರಿಸಲಾಗಿದೆ. ಭಾರತೀಯ ಸಂವಿಧಾನದ 45, 21 (ಎ) ವಿಧಿಗಳು ಶಿಕ್ಷಣದ ಹಕ್ಕನ್ನು ಒಳಗೊಂಡಿವೆ, ಅದರ ಅಡಿಯಲ್ಲಿ 6ರಿಂದ 14 ವರ್ಷ ವಯಸ್ಸಿನ ಎಲ್ಲ ಮಕ್ಕಳಿಗೆ ಲಿಂಗ, ಜಾತಿ, ಧರ್ಮ ಮತ್ತು ಇತರ ತಾರತಮ್ಯವನ್ನು ಲೆಕ್ಕಿಸದೆ ಉಚಿತ ಮತ್ತು ಕಡ್ಡಾಯ ಶಿಕ್ಷಣವನ್ನು ಒದಗಿಸಬೇಕು. ಅವರು ಹೊಂದಿರುವ ಕೆಲವು ಇತರೆ ಹಕ್ಕುಗಳು ಹೀಗಿವೆ: ಮೇಲೆ ಉಲ್ಲೇಖಿಸಿದಂತೆ ಯಾವುದೇ ತಾರತಮ್ಯವಿಲ್ಲದಂತೆ, ಅವರ ಅಭಿಪ್ರಾಯಗಳನ್ನು ಕೇಳಬೇಕು, ಗೌರವಿಸಬೇಕು, ಶೋಷಣೆಯಿಂದ ರಕ್ಷಿಸಬೇಕು ಮತ್ತು ವಿಕಲಚೇತನರು ಹಾಗೂ ವಿಶೇಷ ಅಗತ್ಯವುಳ್ಳವರ ಗೌರವವನ್ನು ಸಂರಕ್ಷಿಸಬೇಕು. ಮಕ್ಕಳು ತಮ್ಮ ಪ್ರಗತಿಗೆ ಸಾಕಷ್ಟು ಅವಕಾಶಗಳನ್ನು ಪಡೆಯಬೇಕು ಮತ್ತು ಕೆಲವು ಅಪಾಯಗಳನ್ನು ಒಳಗೊಂಡಿರುವ ಕಾರ್ಯಗಳಿಂದ ಅವರನ್ನು ದೂರವಿಡಬೇಕು.

ಮಕ್ಕಳು ಅರ್ಥ ಮಾಡಿಕೊಂಡದ್ದು ಮತ್ತು ಕಲಿತದ್ದು ಅವರ ನಿಜಜೀವನದಲ್ಲಿ ಅವರ ಅನುಭವಕ್ಕೆ ಬರಬೇಕು. ತನ್ನ ಹಕ್ಕುಗಳಿಂದ ಅಥವಾ ಶಿಕ್ಷಣದಿಂದ ವಂಚಿತವಾಗಿರುವ ಯಾವುದೇ ಮಗುವಿನ ಅಥವಾ ಘಟನೆಯ ಬಗ್ಗೆಯೂ ಅವರು ತಿಳಿದಿರಬೇಕು.

ಈ ನಿಟ್ಟಿನಲ್ಲಿ ನಾನು 8ನೇ ತರಗತಿಯ ಮಕ್ಕಳಿಗೆ ಒಂದು ಪ್ರಾಜೆಕ್ಟ್-ವರ್ಕ್ನೀಡಿದೆ, ಆ ಪ್ರಾಜೆಕ್ಟ್‌ನಲ್ಲಿ ಅವರು ಸಮೀಕ್ಷೆಯೊಂದನ್ನು ಕೈಗೊಂಡು, ತಮ್ಮ ಸುತ್ತಮುತ್ತಲಿನ ಜನರೊಂದಿಗೆ ಮಾತನಾಡಿ, ಬಾಲ್ಯದಲ್ಲಿ ಶಿಕ್ಷಣದ ಹಕ್ಕು ಅಥವಾ ಮಕ್ಕಳ ಹಕ್ಕುಗಳಿಂದ ವಂಚಿತರಾಗಿರುವ ಐದು ಮಕ್ಕಳನ್ನು ಗುರುತಿಸಿ, ಅದಕ್ಕೆ ಕಾರಣಗಳನ್ನು ಕಂಡುಹಿಡಿಯಬೇಕಿತ್ತು. ಇಲ್ಲಿ ಮಕ್ಕಳು ಈ ಹಕ್ಕುಗಳನ್ನು ಕುರಿತಂತೆ ಎಷ್ಟರಮಟ್ಟಿಗೆ ಅರ್ಥಮಾಡಿಕೊಂಡಿದ್ದಾರೆ ಎಂಬುದನ್ನು ಗುರುತಿಸಬೇಕಿತ್ತು. ಹೆಚ್ಚಿನ ಸಂದರ್ಭಗಳಲ್ಲಿ ನಿಜಜೀವನದ ಆಗು ಹೋಗುಗಳನ್ನು ಶಾಲೆಯಲ್ಲಿ ಓದುವ ವಿಷಯಗಳೊಂದಿಗೆ ಸಂಬಂಧಿಸಲು ನಮಗೆ ಸಾಧ್ಯವಾಗುವುದಿಲ್ಲ. ವಿದ್ಯಾರ್ಥಿಗಳಿಗೆ ಇದು ಸಾಧ್ಯವಾಗಬೇಕು ಮತ್ತು ಅಂತಹ ವಿಷಯಗಳ ಬಗ್ಗೆ ಸಂವೇದನಾಶೀಲತೆಯನ್ನು ಬೆಳೆಸಿಕೊಳ್ಳಬೇಕು ಎಂಬುವುದು ನಮ್ಮ ಗುರಿಯಾಗಿತ್ತು.

ಮಕ್ಕಳು ಸಂತೋಷದಿಂದ ಈ ಕೆಲಸವನ್ನು ಕೈಗೆತ್ತಿಕೊಂಡರು. ತರಗತಿಯಲ್ಲಿ ಈ ಕುರಿತ ನಮ್ಮ ಚರ್ಚೆಯು, ಸಮಾಜದ ವಂಚಿತ ವರ್ಗಗಳ ಬಗ್ಗೆ, ಅವರಿಗೆ ಲಭ್ಯವಿರುವ ಅತ್ಯಂತ ಸೀಮಿತ ಆದಾಯ/ ಮಾರ್ಗ/ ಜೀವನಾಧಾರ/ ಸಂಪನ್ಮೂಲಗಳ ಬಗ್ಗೆ, ಪೋಷಕರಿಲ್ಲದ ಅಥವಾ ಯಾವುದೇ ಸಂಪಾದಿಸುವ ಕೈಗಳಿಲ್ಲದ ಅವರ ಸ್ಥಿತಿಗತಿಯನ್ನು ಕುರಿತು ಹಲವಾರು ಪ್ರಶ್ನೆಗಳನ್ನು ಹುಟ್ಟು ಹಾಕಿತಲ್ಲದೆ, ಈ ಸಮಸ್ಯೆಗಳ ಬಗ್ಗೆ ಮಕ್ಕಳ ಸಂವೇದನಾಶೀಲತೆಯ ಮಟ್ಟವನ್ನು ಇತರರು ಅರ್ಥಮಾಡಿಕೊಳ್ಳಬಹುದಾಗಿತ್ತು. ಮಕ್ಕಳ ಮನಸ್ಸಿಗೆ ಬಂದ ಪ್ರಶ್ನೆಗಳಲ್ಲಿ ಒಂದು, ಆಯ್ಕೆಯನ್ನು ಕುರಿತದ್ದು - ಮಕ್ಕಳು ಶೋಚನೀಯ ಪರಿಸ್ಥಿತಿಗಳಲ್ಲಿದ್ದರೆ ಅವರು ಯಾವುದನ್ನು ಆಯ್ಕೆ ಮಾಡುತ್ತಾರೆ – ಶಾಲೆಯೇ ಅಥವಾ ಮನೆಯೇ? ಅವರು ಶಾಲೆಗೆ ಬಂದರೆ, ಮನೆಗೆ ತೊಂದರೆಯಾಗುತ್ತದೆ ಮತ್ತು ಅವರು ಕೆಲಸ ಮಾಡಿದರೆ ಅದು ಮಕ್ಕಳ ಹಕ್ಕುಗಳ ಉಲ್ಲಂಘನೆಯಾಗುತ್ತದೆ. ಅವರು ತಮ್ಮ ಅನುಭವಗಳನ್ನು ಹಂಚಿಕೊಂಡಾಗ, ಅವರು ಸಮಾಜದ ವಂಚಿತ ವರ್ಗಗಳ ಬಗ್ಗೆ ಕಾಳಜಿಯನ್ನು ಹೊಂದಿದ್ದಾರೆ ಎಂಬುದು ಸ್ಪಷ್ಟವಾಯಿತು. ಪ್ರತಿ ಮಗುವಿಗೆ ಶಿಕ್ಷಣದ ಹಕ್ಕು ಮತ್ತು ಮಕ್ಕಳ ಹಕ್ಕುಗಳನ್ನು ಒದಗಿಸಬೇಕು ಎಂದು ಸರ್ಕಾರ ಹೇಳುತ್ತದೆ, ಆದರೆ ಇದು ನಿಜವಾಗಿಯೂ ಸಾಧ್ಯವೇ? ಹೌದು ಎಂದಾದರೆ, ಅದನ್ನು ಹೇಗೆ

ಸಾಧ್ಯವಾಗಿಸಬಹುದು? ಹೋಟೆಲ್ ಅಥವಾ ಗ್ಯಾರೇಜ್‌ಗಳಲ್ಲಿ ಕೆಲಸ ಮಾಡುವ ಮಕ್ಕಳು ಶಾಲೆಗೆ ಹೋಗುವುದಾದರೂ ಹೇಗೆ? ಅವರು ಶಾಲೆಗೆ ಹೋಗುವುದಾದರೆ, ಅವರನ್ನುಕೆಲಸದಲ್ಲಿಉಳಿಸಿಕೊಳ್ಳಲುಯಾರುಸಿದ್ಧರಿದ್ದಾರೆ? ಅವರು ಯಾವಾಗ ಕೆಲಸಕ್ಕೆ ಹೋಗುತ್ತಾರೆ? ಕಾನೂನು ನಮ್ಮ ಹಕ್ಕುಗಳನ್ನು ರಕ್ಷಿಸುತ್ತದೆ ಮತ್ತು ಅವುಗಳು ಉಲ್ಲಂಘನೆ ಆಗದಂತೆ ತಡೆಯುತ್ತದೆ. ಆದರೆ ವಂಚಿತ ಸಮುದಾಯದ/ವರ್ಗದ ಮಕ್ಕಳು ಅನಿವಾರ್ಯತೆಯಿಂದಾಗಿ ಅಪಾಯವನ್ನು ಎದುರು ಹಾಕಿಕೊಂಡು ಏನನ್ನಾದರೂ ಮಾಡಲೇಬೇಕಾಗುತ್ತದೆ ಮತ್ತು ಕುಟುಂಬದ ಇತರ ಸದಸ್ಯರಿಗೆ ತೊಂದರೆ ಆಗಬಹುದು ಎಂಬಭಯದಿಂದ ಅವರು ಆ ಬಗ್ಗೆ ದೂರು ನೀಡಲೂ ಸಾಧ್ಯವಿಲ್ಲ. ಸುಲಭವಾಗಿ ಉತ್ತರಗಳು ಸಿಗದ ಕ್ಲಿಷ್ಟಕರವಾದ ಇತರ ಅನೇಕ ಪ್ರಶ್ನೆಗಳಿವೆ, ಮತ್ತು ನಾನು ಮಕ್ಕಳಿಂದಲೇ ಈ ಪ್ರಶ್ನೆಗಳಿಗೆ ಉತ್ತರಗಳನ್ನು ಪಡೆಯಲು ಪ್ರಯತ್ನಿಸಿದೆ.

ವಿದ್ಯಾರ್ಥಿಗಳು ಸಮಾಜದಲ್ಲಿ ಸಮೀಕ್ಷೆಯನ್ನು ನಡೆಸಿದ ಅನಂತರ ಅವರ ಆಲೋಚನೆಯಲ್ಲಿ ಏನು ಬದಲಾವಣೆಯಾಗಿದೆ, ಅವರಿಗೆ ಏನು ಅನಿಸಿತು ಮತ್ತು ಅವರು ಏನು ಇಷ್ಟಪಟ್ಟರು ಎಂಬ ಅವರ ಅನುಭವಗಳನ್ನು ಬರವಣಿಗೆಯಲ್ಲಿ ವ್ಯಕ್ತಪಡಿಸಲು ಹೇಳಿದೆ.

ಮಕ್ಕಳ ಅನುಭವಗಳು ತುಂಬ ವಿಭಿನ್ನವಾಗಿತ್ತು. ಅವರು ತುಂಬ ಭಾವುಕರಾದರು. ಕಾನೂನು ಜಾರಿಯಲ್ಲಿದ್ದರೂ ವಾಸ್ತವ ಬೇರೆಯೇ ಇರುವುದು ತಮಗೆ ಸ್ವಲ್ಪವೂ ಇಷ್ಟವಾಗಲಿಲ್ಲ ಎಂದರು. ಕೇವಲ ಕಾನೂನುಗಳನ್ನು ರಚಿಸುವ ಮೂಲಕ ಸಮಸ್ಯೆಗಳನ್ನು ಪರಿಹರಿಸಲಾಗುವುದಿಲ್ಲ – ಇತರ ವಿಧಾನಗಳ ಮತ್ತು ಸಂಪನ್ಮೂಲಗಳ ಬಗ್ಗೆಯೂ ಯೋಚಿಸುವ ಆವಶ್ಯಕತೆಯಿದೆ. ಮನೆಯಲ್ಲಿ ನಿಜವಾಗಿಯೂ ಸಮಸ್ಯೆ ಇರುವವರು ಕೆಲಸ ಮಾಡುವುದನ್ನು ನಿಲ್ಲಿಸಲು ಸಾಧ್ಯವಿಲ್ಲ, ಆದರೆ ಅವರಿಗಾಗಿ ಶಾಲೆಗಳನ್ನು ತೆರೆಯುವ ಆವಶ್ಯಕತೆಯಿದೆ. ಅವರಿಗೆ ಸರಿಹೊಂದುವ ಸಮಯದಲ್ಲಿ ಶಾಲೆಗಳನ್ನು ನಡೆಸಿದರೆ, ಅವರು ಕೆಲಸ ಮಾಡುವ ಜೊತೆಗೆ ಶಿಕ್ಷಣವನ್ನೂ ಪಡೆಯಬಹುದು. ಆಗ ಮಾತ್ರ ಸಂವಿಧಾನ ಖಾತರಿಪಡಿಸಿದ ಶಿಕ್ಷಣದಹಕ್ಕು (ಆರ್ ಟಿಇ ) ಮತ್ತು ಮಕ್ಕಳ ಹಕ್ಕುಗಳನ್ನು ಜಾರಿಗೆ ತರಲು ಸಾಧ್ಯ.

**ಮಕ್ಕಳ ಅನುಭವಗಳು**

**ಕೆಲವು ಪ್ರತಿಕ್ರಿಯೆಗಳು ಇಲ್ಲಿವೆ:**

- ನನಗೆ ಈ ಕೆಲಸವು ಇಷ್ಟವಾಯಿತು. ಏಕೆಂದರೆ, ಇದನ್ನು ಮಾಡುವಾಗ, ನನ್ನ ಹಳ್ಳಿಯಲ್ಲಿ ಅನೇಕ ಮಕ್ಕಳು ಶಾಲೆಗೆ ಹೋಗುವುದಿಲ್ಲ ಮತ್ತು ಅವರು ಮಕ್ಕಳಾಗಿದ್ದರೂ ತಮ್ಮ ಹಕ್ಕುಗಳ ಉಲ್ಲಂಘನೆಯನ್ನು ಅವರು ಎದುರಿಸಬೇಕು ಎಂದು ನನಗೆ ತಿಳಿದುಬಂತು. ಮನೆಯಿಂದ ಹೊರಗೆ ಹೋಗಿ ಸುತ್ತಮುತ್ತ ತಿರುಗಾಡುವ ಅವಕಾಶ ಸಿಕ್ಕಿದ್ದರಿಂದಲೂ ಇದು ನನಗೆ ಇಷ್ಟವಾಯಿತು. ಆ ಮಕ್ಕಳು ಶಾಲೆಗೆ ಹೋಗದಿರಲು ಕಾರಣವೇನು ಎಂದು ನಾನು ತಿಳಿದುಕೊಳ್ಳಲು ಬಯಸಿದ್ದರೂ, ಅವರು ಈ ಬಗ್ಗೆ ಮಾತನಾಡಲು ಇಚ್ಛಿಸದ ಕಾರಣ ನಾನು ನಿರಾಶೆಗೊಂಡೆ.
- ನಾನು ರಜೆಯ ಸಮಯದಲ್ಲಿ ಸಮೀಕ್ಷೆಗೆ ಹೋಗಿದ್ದೆ ಮತ್ತು ವಿವಿಧ ಸ್ಥಳಗಳಿಗೆ ಹೋಗಿ ಮಕ್ಕಳ ಬಗ್ಗೆ ಮಾಹಿತಿ ಸಂಗ್ರಹಿಸಿದೆ. ನಾನು ಸುಮನ್ (ಕಾಲ್ಪನಿಕ ಹೆಸರು) ಮನೆಗೆ ಹೋಗಿ ಅವರ ತಾಯಿಯನ್ನು ಅವಳನ್ನು ಏಕೆ ಆಟವಾಡಲು ಬಿಡುತ್ತಿಲ್ಲ ಎಂದು ಕೇಳಿದಾಗ ಅವರು ತಮ್ಮ ಆರ್ಥಿಕ ಸ್ಥಿತಿ ಉತ್ತಮವಾಗಿಲ್ಲ. ಅವಳು ತಿಂಗಳಿಗೆ ಕೇವಲ 800 ರೂಪಾಯಿ ದೊರೆಯುವ, ರಜಾಯಿ ಹೊಲಿಯುವ ಕೆಲಸವನ್ನು ಮಾಡುತ್ತಿದ್ದಾಳೆ ಎಂದರಲ್ಲದೆ, 'ಸುಮನ್ಕೆಲಸ ಮಾಡಿದರೆ, ಅದರಿಂದ ಸಹಾಯವಾಗುತ್ತದೆ ಮತ್ತು ಅವಳು ಮದುವೆಯಾದಾಗ ತನ್ನ ಅತ್ತೆಯ ಮನೆಯಲ್ಲಿ ಕೆಲಸ ಮಾಡಲು ಸುಸಜ್ಜಿತಳಾದ ಹಾಗೆಯೂ ಆಗುತ್ತದೆ' ಎಂದರು. ನಾನು ಬೇಗ ಕೆಲಸ ಮುಗಿಸಿ ಆಟಕ್ಕೆ ಬಾ ಎಂದು ಸುಮನ್‌ಗೆ ಹೇಳಿದೆ. ಅದಕ್ಕೆ ಸುಮನ್ ಅವರ ತಾಯಿ ನನ್ನನ್ನು ಗದರಿಸಿದರು. ನಮ್ಮ ಸಮಾಜದಲ್ಲಿ ಅನೇಕರು ಮಕ್ಕಳಿಗೆ ಆಟವಾಡಲು ಮತ್ತು ಓದಲು ಸಹ ಅನುಮತಿಸುವುದಿಲ್ಲ ಎಂದು ತಿಳಿದು ನನಗೆ ಅಸಮಾಧಾನ ಮತ್ತು ದುಃಖವಾಯಿತು. ಇಂತಹ ವಾತಾವರಣದಲ್ಲಿ ನಮ್ಮ ದೇಶವು ಹೇಗೆ ಅಭಿವೃದ್ಧಿಗೊಳ್ಳುತ್ತದೆ ಮತ್ತು ಮುಂದುವರಿಯುತ್ತದೆ?
- ಈ ಕೆಲಸವನ್ನು ಮಾಡುವಾಗ, ನನಗೆ ಒಳ್ಳೆಯದು ಮತ್ತು ಕೆಟ್ಟದು ಎರಡೂ ಅನುಭವಕ್ಕೆ ಬಂತು. ನಮ್ಮ ಹಳ್ಳಿಗಳಲ್ಲಿ, ನಗರಗಳಲ್ಲಿ ಮತ್ತು ಸಮಾಜದಲ್ಲಿ ಎಷ್ಟೋ ಮಕ್ಕಳು ಶಿಕ್ಷಣವನ್ನು ಪಡೆಯಲು ಸಾಧ್ಯವಾಗುತ್ತಿಲ್ಲ ಎಂಬುದನ್ನು ನಾನು ತಿಳಿದುಕೊಂಡೆ. ಮಕ್ಕಳನ್ನು ಶಾಲೆಗೆ ಕಳುಹಿಸದವರ ಮಾಹಿತಿಯು ಮಾಧ್ಯಮಗಳ ಸಹಾಯದಿಂದ ಸರ್ಕಾರಕ್ಕೆ ತಲಪಬೇಕು ಎಂದು ನಾನು ಭಾವಿಸುತ್ತೇನೆ. ಸಂವಿಧಾನವು ಶ್ರೀಮಂತ ಅಥವಾ ಬಡವ, ಗಂಡು ಅಥವಾ ಹೆಣ್ಣು ಮಗುವು ಶಿಕ್ಷಣದ ಹಕ್ಕನ್ನು ಹೊಂದಿದೆ ಎಂದು ಹೇಳುತ್ತದೆ ಮತ್ತು ತಮ್ಮ ಮಕ್ಕಳನ್ನು ಶಾಲೆಗೆ ಕಳುಹಿಸದ ಪೋಷಕರು ಕಾನೂನಿನ ಪರಿಣಾಮಗಳನ್ನು ಎದುರಿಸಬೇಕಾಗುತ್ತದೆ ಎನ್ನುತ್ತದೆ. ಆದರೆ ಯಾವುದೇ ಪೋಷಕರಿಗೆ ಶಿಕ್ಷೆಯಾಗಿಲ್ಲ ಎಂದು ನಮಗೆ ತಿಳಿದಿದೆ. ಹೆಚ್ಚಿನ ಹುಡುಗಿಯರು

ಮನೆಯಲ್ಲಿ ಕೆಲಸವನ್ನು ಮಾಡುತ್ತಾರೆ. ಆದರೆ ಹೆಣ್ಣುಮಕ್ಕಳು ಚೆನ್ನಾಗಿ ಓದಬೇಕು ಮತ್ತು ಉತ್ತಮ ಶಿಕ್ಷಣ ಪಡೆಯಬೇಕು ಎಂಬುದು ಎಲ್ಲರಿಗೂ ತಿಳಿದಿದೆ. ಅವಳು ತಾಯಿ. ಮಹಿಳೆಯರು ಇಲ್ಲದಿದ್ದರೆ ಗಂಡು ಮಕ್ಕಳು ಜನಿಸುವುದಿಲ್ಲ.

- ನನ್ನ ಹಳ್ಳಿಯಲ್ಲಿ ಮಕ್ಕಳ ಹಕ್ಕುಗಳ ಉಲ್ಲಂಘನೆಯನ್ನು ಎದುರಿಸುವ ಮಕ್ಕಳಿಲ್ಲ. ಹಾಗಾಗಿ ನಾನು ಪಕ್ಕದ ಹಳ್ಳಿಗೆ ಹೋಗಿದ್ದೆ. ಮೂರು ಮಕ್ಕಳು ಅಧ್ಯಯನದಲ್ಲಿ ಆಸಕ್ತರಾಗಿದ್ದಾಗ್ಯೂ, ಆರ್ಥಿಕವಾಗಿ ಉತ್ತಮ ಪರಿಸ್ಥಿತಿಯಲ್ಲಿರಲಿಲ್ಲ. ಅವರಿಗೆ ತಂದೆ ಇಲ್ಲ, ತಾಯಿ ಒಬ್ಬಳೇ ಸಂಪಾದನೆ ಮಾಡುತ್ತಿದ್ದಾಳೆ ಮತ್ತು ಅವರಿಗೆ ಅನೇಕ ಸಹೋದರರು ಮತ್ತು ಸಹೋದರಿಯರು ಇದ್ದಾರೆ ಎಂದು ನಾವು ತಿಳಿದುಕೊಂಡೆವು. ನಾನು ಈ ಕೆಲಸವನ್ನು ಮಾಡುವುದನ್ನು ಆನಂದಿಸಿದೆ. ಆದರೆ ನಮ್ಮ ಸಮಾಜದಲ್ಲಿ ಮಕ್ಕಳು ಬಯಸಿದರೂ ಓದಲು ಸಾಧ್ಯವಿಲ್ಲ ಮತ್ತು ಇಷ್ಟು ಚಿಕ್ಕವಯಸ್ಸಿನಲ್ಲೂ ಅವರು ಕೆಲಸ ಮಾಡಬೇಕೆಂದು ತಿಳಿದು ಬೇಸರವಾಯಿತು. ಅವರು ತಮ್ಮ ಬಿಡುವಿನ ವೇಳೆಯಲ್ಲಿ ಆಟವಾಡಲು ಮತ್ತು ಸುತ್ತಮುತ್ತ ತಿರುಗಾಡಲು ಸ್ವತಂತ್ರರಲ್ಲ.
- ನಾನು ಈ ಕೆಲಸವನ್ನು ಮಾಡಲು ಇಷ್ಟಪಟ್ಟೆ. ಏಕೆಂದರೆ ನನಗೆ ಹಲವಾರು ಜನರನ್ನು ಭೇಟಿ ಮಾಡಲು ಮತ್ತು ಅವರೊಂದಿಗೆ ಮಾತನಾಡಲು ಅವಕಾಶ ಸಿಕ್ಕಿತು ಮತ್ತು ನನ್ನ ಜ್ಞಾನವನ್ನು ವಿಸ್ತರಿಸಿಕೊಳ್ಳಲು ಸಾಧ್ಯವಾಯಿತು. ಇಂದಿಗೂ ಎಷ್ಟೋ ಮಕ್ಕಳು ಶಾಲೆಗೆ ಹೋಗುತ್ತಿಲ್ಲ ಎಂಬ ವಿಚಾರ ನನಗೆ ಇಷ್ಟವಾಗಲಿಲ್ಲ.

**ಈ ಪ್ರಾಜೆಕ್ಟ್‌ನಿಂದಾಗಿ ಮಕ್ಕಳು ಅನೇಕ ಅಂಶಗಳನ್ನು ಕಲಿತರು:**

- ನಮ್ಮ ಸಮಾಜದಲ್ಲಿ ಶಾಲೆಗೆ ಹೋಗಲು ಇಷ್ಟಪಡದ ಅನೇಕ ಮಕ್ಕಳಿದ್ದಾರೆ ಮತ್ತು ಅವರ ಪೋಷಕರು ಸಹ ಅವರನ್ನು ಶಾಲೆಗೆ ಕಳುಹಿಸುವುದಿಲ್ಲ. ಅಂಗಡಿ ಮತ್ತು ಹೋಟೆಲ್‌ಗಳಲ್ಲಿ ದುಡಿದು, ದುರ್ಮಾರ್ಗದಲ್ಲಿ ತಮ್ಮ ದುಡಿಮೆಯನ್ನು ಖರ್ಚುಮಾಡಿ,ಮಾದಕದ್ರವ್ಯ ಮುಂತಾದವುಗಳ ಬಲಿಪಶುಗಳಾಗುತ್ತಾರೆ.
- ಶಾಲೆಗೆ ಹೋಗದ ಮಕ್ಕಳ ಸಮಸ್ಯೆಗಳನ್ನು ಆಲಿಸಲು ಇದೊಂದು ಅವಕಾಶವಾಗಿತ್ತು. ಕೆಲವು ಕುಟುಂಬಗಳ ಆರ್ಥಿಕ ಸ್ಥಿತಿ ಉತ್ತಮವಾಗಿಲ್ಲ, ಶಿಕ್ಷಣಕ್ಕೆ ಯಾವುದೇ ಶುಲ್ಕ ವಿಧಿಸದ ಸರ್ಕಾರಿ ಶಾಲೆಗಳಿಗೆ ತಮ್ಮ ಮಕ್ಕಳನ್ನು ಕಳುಹಿಸುವಂತೆ ನಾನು ಸೂಚಿಸಿದೆ. ಈ ನಿಟ್ಟಿನಲ್ಲಿ ಸರಕಾರ ಹಮ್ಮಿಕೊಂಡಿರುವ ಅಭಿಯಾನ ಯಶಸ್ವಿಯಾಗಲು ಪೋಷಕರು ತಮ್ಮ ಮಕ್ಕಳನ್ನು ಅವಶ್ಯವಾಗಿ ಶಾಲೆಗೆ ಕಳುಹಿಸಬೇಕು.

- ಕೆಲವರು ತಮ್ಮ ಮಕ್ಕಳಿಗೆ ಚಿಕ್ಕ ವಯಸ್ಸಿನಲ್ಲಿಯೇ ಮದುವೆ ಮಾಡಿದ್ದಾರೆ ಮತ್ತು ಇತರರು ತಮ್ಮ ಮಕ್ಕಳನ್ನು ಶಾಲೆಗೆ ಕಳುಹಿಸದೆ, ಅವರನ್ನು ಕಠಿಣ ಕೆಲಸದಲ್ಲಿ ತೊಡಗಿಸುತ್ತಾರೆ.
- ನಾನು ಇಬ್ಬರು ಸಹೋದರರನ್ನು ನೋಡಿದೆ. ನಾನು ಅವರ ಬಳಿ ಹೋಗಲು ಪ್ರಯತ್ನಿಸಿದರೂ ಅದು ನನಗೆ ಸಾಧ್ಯವಾಗಲಿಲ್ಲ. ಹೀಗಾಗಿ ನಾನು ನನ್ನ ಸ್ನೇಹಿತನೊಬ್ಬನನ್ನು ಅವರ ಬಳಿ ಕಳುಹಿಸಿದೆ. ಅವನು, ಅವರು ಬಿಹಾರದವರಾಗಿರುವುದರಿಂದ ಅವರ ಭಾಷೆ ಅರ್ಥವಾಗುವುದಿಲ್ಲ ಎಂದು ವಾಪಸ್ಸು ಬಂದ. ಅವರಿಬ್ಬರೂ ಅಂಗಡಿಯಲ್ಲಿ ವಾಸವಾಗಿರುವುದನ್ನು ನಾನು ನೋಡಿದೆ. ಮೊದಲನೆಯ ಸಹೋದರನು ನಮ್ಮ ಮನೆಯ ಹತ್ತಿರದ ಅಂಗಡಿಯಲ್ಲಿ ಮತ್ತು ಎರಡನೆಯವನು ಕಬ್ಬಿಣದ ಸಾಮಾನುಗಳ ಅಂಗಡಿಯಲ್ಲಿ ಕೆಲಸಮಾಡುತ್ತಾನೆ.

**ಮಕ್ಕಳು ನೀಡಿದ ಕೆಲವುಸಲಹೆಗಳು:**

- ದೇಶದ ಪ್ರಗತಿಗಾಗಿ ಪ್ರತಿಯೊಬ್ಬರಿಗೂ ಶಿಕ್ಷಣ ನೀಡಬೇಕು.
- ಅಂಗಡಿಗಳು, ಗ್ಯಾರೇಜುಗಳು ಇತ್ಯಾದಿಗಳಲ್ಲಿ ಕೆಲಸ ಮಾಡುವ ಮಕ್ಕಳಿಗೆ ಪ್ರತ್ಯೇಕ ವ್ಯವಸ್ಥೆ ಇರಬೇಕು.
- ಆರ್ಥಿಕ ಸವಾಲುಗಳನ್ನು ಹೊಂದಿರುವವರು ಶಾಲೆಗೆ ಹೋಗುವುದು ಮತ್ತು ಕೆಲಸಕ್ಕೆ ಹೋಗುವುದು –ಈ ಎರಡರಲ್ಲಿ ಒಂದನ್ನು ಆಯ್ಕೆ ಮಾಡಿಕೊಳ್ಳಬೇಕು. ಯಾವುದಕ್ಕೆ ಆದ್ಯತೆ ನೀಡಬೇಕು? ಹೇಗಾದರೂ ಜೀವನವನ್ನು ಮುಂದುವರಿಸುವುದು ಅವರಿಗೆ ಆವಶ್ಯಕ. ಅಂತಹ ಪರಿಸ್ಥಿತಿಯಲ್ಲಿ ಅಂತಹ ಮಕ್ಕಳನ್ನು ಹಾಸ್ಟೆಲ್‌ನಲ್ಲಿ ಇರಿಸಿದರೆ ಒಳ್ಳೆಯದು ಮತ್ತು ಅವರು ಓದುವ ಜೊತೆಗೆ ಕೆಲವು ಕೆಲಸ/ಉದ್ಯೋಗವನ್ನು ಕಲಿಯಲು ಸಾಧ್ಯವಾಗುತ್ತದೆ. ಇದರಿಂದ ಅವರು ಏನಾದರೂ ಸಂಪಾದಿಸಬಹುದು ಮತ್ತು ಅವರ ಕುಟುಂಬಕ್ಕೆ ಆಸರೆಯಾಗಬಹುದು.
- ಹಿರಿಯ ತರಗತಿಯ ಮಕ್ಕಳಿಗೆ, ಇವರಿಗೆ ಕಲಿಸುವ (coaching) ಮತ್ತು ಈ ವಿದ್ಯಾರ್ಥಿಗಳಿಗೆ ಅಧ್ಯಯನದಲ್ಲಿ ಸಹಾಯ ಮಾಡುವ ಜವಾಬ್ದಾರಿಯನ್ನು ನೀಡುವುದರ ಮೂಲಕ ವಂಚಿತ ಮಕ್ಕಳು ಸಹ ಅಧ್ಯಯನದಲ್ಲಿ ತೊಡಗಬಹುದಲ್ಲದೆ, ಸಾಮಾಜಿಕ-ಸಹಕಾರವನ್ನು ಸಹ ಸಾಧಿಸಬಹುದು.

**ಉಪಸಂಹಾರ**

ಎರಡು ಅಂಶಗಳು ಬೆಳಕಿಗೆ ಬಂದವು:

ಮೊದಲಿಗೆ, ಮಕ್ಕಳು ಇದನ್ನು ಸಂತೋಷದಾಯಕ ಕಾರ್ಯವೆಂದು ಕಂಡುಕೊಂಡರು. ಇದನ್ನು ಮಾಡುವುದು ಒಳ್ಳೆಯದು ಎಂದು ಭಾವಿಸಿದರು. ಇದಕ್ಕೆ ಒಂದು ಕಾರಣ, ಅವರು ತಮ್ಮ ಮನೆಗಳಿಂದ ಹೊರಬಂದು ಜನರೊಂದಿಗೆ ಮಾತನಾಡಲು ಸಾಧ್ಯವಾದುದು. ಇದರ ಪರಿಣಾಮವಾಗಿ ಅವರು ಆತ್ಮ-ವಿಶ್ವಾಸವನ್ನು ಗಳಿಸಿದರು. ಅವರಿಗೆ ಸಮಾಜದ ನೈಜ ಮುಖವನ್ನು ನೇರವಾಗಿ ವೀಕ್ಷಿಸಲು ಸಾಧ್ಯವಾಯಿತು. ಅವರಿಗೆ ಈ ಅವಕಾಶ ಸಿಗದೇ ಇದ್ದಿದ್ದರೆ ಅವರ ಜ್ಞಾನ ಕೇವಲ ಪುಸ್ತಕಗಳ ಓದಿಗಷ್ಟೇ ಸೀಮಿತವಾಗುತ್ತಿತ್ತು ಮತ್ತು ಅವರಿಗೆ ವಾಸ್ತವದಅರಿವಾಗುತ್ತಿರಲಿಲ್ಲ. ಶಿಕ್ಷಣದ ಹಕ್ಕು ಮತ್ತು ಮಕ್ಕಳ ಹಕ್ಕುಗಳ ಮಹತ್ತ್ವ ಮತ್ತು ಸರ್ಕಾರದ ಮಟ್ಟದಲ್ಲಿ ಕಾನೂನಿನ ಅನುಷ್ಠಾನದಲ್ಲಿನ ನ್ಯೂನತೆಗಳು ಮತ್ತು ಪೋಷಕರು ಮಕ್ಕಳನ್ನು ಶಾಲೆಗೆ ಕಳುಹಿಸದೇ ಇರುವ ಪರಿಸ್ಥಿತಿಗಳನ್ನು ಅವರು ಅರಿತುಕೊಂಡರು. ಮಕ್ಕಳನ್ನು ನೇಮಿಸಿಕೊಂಡು ಅವರಿಂದ ಕೆಲಸ ಮಾಡಿಸುವ ಅಂಗಡಿಯವರಿಂದ ಮಕ್ಕಳ ಹಕ್ಕುಗಳು ಹೇಗೆ ಉಲ್ಲಂಘನೆಯಾಗುತ್ತವೆ ಎಂಬ ಅರಿವೂ ಅವರಲ್ಲಿ ಮೂಡಿತು.

ಎರಡನೆಯದಾಗಿ, ಮಕ್ಕಳೂ ಸಹಪರಿಹಾರಗಳ ಬಗ್ಗೆ ಯೋಚಿಸಲು ಸಮರ್ಥರಾದರು ಮತ್ತು ಅವರು ಹೇಳುವುದನ್ನು ಇತರರು ಆಲಿಸುತ್ತಾರೆಯೇ ಅಥವಾ ಇಲ್ಲವೇ ಎಂದು ಚಿಂತಿಸದೆ ತಮ್ಮ ಅಭಿಪ್ರಾಯಗಳನ್ನು ಮುಕ್ತವಾಗಿ ಮಂಡಿಸಿದರು. ಅವರು ಕೆಲವು ಉತ್ತಮ ಸಲಹೆಗಳನ್ನೂ ನೀಡಿದರು -ಅವು, ಮಾಧ್ಯಮಗಳ ಮೂಲಕ ತಮ್ಮ ಅಭಿಪ್ರಾಯಗಳನ್ನು ಸರ್ಕಾರಕ್ಕೆ ತಲಪಿಸುವುದು, ಹಿರಿಯ ವಿದ್ಯಾರ್ಥಿಗಳು ಶಾಲೆಯಲ್ಲಿ ಕಲಿಯಲು ಸಾಧ್ಯವಾಗದ ಮಕ್ಕಳಿಗೆ ಕಲಿಸುವ ಯೋಜನೆಯನ್ನು ಕೈಗೆತ್ತಿಕೊಳ್ಳುವುದು ಹಾಗೂ ಅಧ್ಯಯನದ ಅವಕಾಶದ ಜೊತೆಗೆ ಅವರ ಆರ್ಥಿಕ ಸ್ಥಿತಿಯನ್ನು ಸುಧಾರಿಸಲು ಸಹಾಯ ಮಾಡುವ ಉತ್ಪಾದಕ ಕೆಲಸಕ್ಕೆ ತೊಡಗಬಹುದಾದ ನಿಟ್ಟಿನಲ್ಲಿ, ಕೆಲಸಮಾಡುವ ಮಕ್ಕಳಿಗೆ ಪ್ರತ್ಯೇಕ ಹಾಸ್ಟೆಲ್‌ಗಳ ಅವಕಾಶವನ್ನು ಒಳಗೊಂಡಿವೆ.

**ಸಹಾಬುದ್ದಿನ್** ಅವರು ಉತ್ತರಾಖಂಡದ ಉಧಮ್ ಸಿಂಗ್ ನಗರದಲ್ಲಿನ ದಿನೇಶ್‌ಪುರ್‌ನಲ್ಲಿರುವ ಅಜೀಮ್ ಪ್ರೇಮ್‌ಜಿ ಶಾಲೆಯಲ್ಲಿ ಉಪಾಧ್ಯಾಯರಾಗಿದ್ದು, ಈ ಶಾಲೆಯಲ್ಲಿ, ತರಗತಿಗಳಲ್ಲಿನ ಬೋಧನೆಯಲ್ಲಿ, 5 ವರ್ಷಗಳ ಅನುಭವವನ್ನು ಹಾಗೂ ಅಜೀಮ್ ಪ್ರೇಮ್‌ಜಿ ಫೌಂಡೇಶನ್‌ನಲ್ಲಿನ ಮೌಲ್ಯಮಾಪನದಲ್ಲಿ 3 ವರ್ಷಗಳ ಅನುಭವವನ್ನು ಹೊಂದಿದ್ದಾರೆ. ಆಹಾರೋದ್ಯಮದಲ್ಲಿ, 10 ವರ್ಷಗಳ ಅನುಭವವೂ ಇವರಿಗಿದೆ. ಪ್ರಸ್ತುತದಲ್ಲಿ ಇವರು, ಹಿರಿಯ ಪ್ರಾಥಮಿಕ ತರಗತಿಗಳಲ್ಲಿ ಸಮಾಜ ವಿಜ್ಞಾನವನ್ನು ಮತ್ತು

ಪ್ರಾಥಮಿಕ ತರಗತಿಗಳಲ್ಲಿ ಇತರೆ ವಿಷಯಗಳನ್ನು ಬೋಧಿಸುತ್ತಿದ್ದಾರೆ. ಶಿಕ್ಷಣದಲ್ಲಿ ಸ್ನಾತಕ ಪದವಿಯನ್ನು ಮತ್ತು ರಾಜ್ಯ ಶಾಸ್ತ್ರದಲ್ಲಿ ಸ್ನಾತಕೋತ್ತರ ಪದವಿಯನ್ನು ಪಡೆದಿದ್ದಾರೆ. ಇವರ ಸಂಪರ್ಕ: sahabuddin.ansari@azimpremjifoundation.org